**ದಿನಾಂಕಃ03-03-2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ. ರವರಿಂದ:**

ಆ ದಿನ ಜಪ್ತು ಮಾಡಿಕೊಂಡ ಒಟ್ಟು 15 ಗ್ಯಾಸ್ ಒಲೆಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ಮುಮ-1 ರಿಂದ 15 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ದಿಃ04-04-2018 ರಿಂದ ದಿಃ18-05-2018 ರ ವರೆಗೆ ಚುನಾವಣಾ ನೀತಿ ಸಂಹಿತೆ ಚಾಲ್ತಿಯಲ್ಲಿತ್ತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ.ಬಿ.ಜಿ.ಎಂ ವಕೀಲರಿಂದಃ**

ಘಟನೆ ನಡೆದಿದೆ ಎನ್ನುವ ದಿನ ನನಗೆ 11.00 ಗಂಟೆಗೆ ಕರೆ ಬಂತು. ದಿಃ06-05-2018 ರಂದು ಘಟನೆ ನಡೆದಿದೆ. ನನಗೆ ಕರೆ ಬಂದಾಗ ನಾನು ವಾಹನಗಳ ತಪಾಸಣೆ ನಡೆಸುತ್ತಿದ್ದೆ. ನಾನು ಆ ದಿನ ಚುನಾವಣಾ ಅಧಿಕಾರಿಯಾಗಿ ಕರ್ತವ್ಯದಲ್ಲಿದ್ದೆ. ನಾನು ವಾಹನ ತಪಾಸಣೆ ನಡೆಸುತ್ತಿದ್ದ ಸ್ಥಳದಿಂದ ಘಟನೆ ನಡೆದ ಸ್ಥಳವು ಸುಮಾರು 7 ರಿಂದ 8 ಕಿ.ಮೀ ದೂರ ಇದೆ. ನಾನು ವಾಹನ ತಪಾಸಣೆ ಮಾಡುತ್ತಿದ್ದ ಸ್ಥಳದಿಂದ 11.40 ಕ್ಕೆ ಹೊರಟೆ. ನಾನು ಘಟನಾ ಸ್ಥಳವನ್ನು ಸುಮಾರು 15 ನಿಮಿಷದ ಅವಧಿಯಲ್ಲಿ ತಲುಪಿದ್ದೇನೆ. ನಾನು ಸುಮಾರು 11.55 ಕ್ಕೆ ಘಟನಾ ಸ್ಥಳ ತಲುಪಿದ್ದೇನೆ. 15 ರಿಂದ 20 ಗ್ಯಾಸ್ ಒಲೆಗಳನ್ನು ಸಾಗಿಸುತ್ತಿದ್ದಾರೆ ಎಂದು ಮಾಹಿತಿ ಬಂತು. ನಾನು ಆ ದಿನ ಸುಮಾರು 50 ವಾಹನಗಳನ್ನು ತಪಾಸಣೆ ಮಾಡಿದ್ದೇನೆ. ಆ ಸಮಯದಲ್ಲಿ ನನ್ನ ಜೊತೆ ಒಬ್ಬರು ಪಿ.ಡಿ.ಓ, ವಿಡಿಯೋಗ್ರಾಫರ್, ಒಬ್ಬ ಪೊಲೀಸ್ ಸಿಬ್ಬಂದಿ ಮತ್ತು ವಾಹನದ ಚಾಲಕ ಇದ್ದರು. ನನ್ನ ಜೊತೆ ಪೊಲೀಸ್ ಸಿಬ್ಬಂದಿಯಾದ ಚಾಸಾ-6 ರವರು ಇದ್ದರು. ನಾನು ಘಟನಾ ಸ್ಥಳಕ್ಕೆ ತಲುಪಿದ ಸಮಯದಿಂದ ಘಟನೆ ನಡೆದು ಮುಗಿಯುವವರೆಗೆ ನಾನು ಸ್ಥಳದಲ್ಲಿಯೇ ಇದ್ದೆ. ನಾನು ಮನೆಯಿಂದ ಊಟ ತೆಗೆದುಕೊಂಡು ಹೋಗುತ್ತೇನೆ. ಈ ದಿನ ನಾನು ಮನೆಯಿಂದ ಊಟ ತಂದಿಲ್ಲ.

ನಾನು ಹೇಳುವಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಯಾರೋ ಹಿತಾಸಕ್ತಿವುಳ್ಳ ಜನರು ಗ್ಯಾಸ್ ಒಲೆಗಳನ್ನು ಹಿಡಿದಿದ್ದೇವೆ ಎಂದು ಹೇಳಿ ತಯಾರಿಸಿದ ಒಂದು ದಾಖಲೆಗೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 2 ರ ಭಾವಚಿತ್ರವನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಎಷ್ಟು ಗ್ಯಾಸ್ ಒಲೆಗಳು ಕಂಡು ಬರುತ್ತವೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಟ್ಟು 15 ಗ್ಯಾಸ್ ಒಲೆಗಳು ನಿ.ಪಿ.2 ರಲ್ಲಿ ಕಂಡು ಬರುತ್ತವೆ ಎಂದು ನುಡಿಯುತ್ತಾರೆ. ನಿ ಪಿ 2 ರ ಭಾವಚಿತ್ರವನ್ನು ಸಾಕ್ಷಿಗೆ ಪುನಃ ತೋರಿಸಿ ಸದರಿ ಭಾವಚಿತ್ರದಲ್ಲಿರುವ ಗ್ಯಾಸ್ ಒಲೆಗಳು ಯಾವುದೇ ರಟ್ಟಿನ ಬಾಕ್ಸಿನ ಒಳಗೆ ಇಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ರಟ್ಟಿನ ಪೆಟ್ಟಿಗೆಯೊಳಗೆ ಇದ್ದ ಗ್ಯಾಸ್ ಒಲೆಗಳನ್ನು ಹೊರಗೆ ತೆಗೆದು ಭಾವಚಿತ್ರ ತೆಗೆದಿದ್ದೇವೆ ಎಂದು ನುಡಿಯುತ್ತಾರೆ. ನಾನು ಈ ಉತ್ತರವನ್ನು ಮಾನ್ಯ ಎ ಪಿ ಪಿ ರವರ ಸಹಾಯದೊಂದಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ ಪಿ 2 ಮತ್ತು ನಿ ಪಿ 3ರ ಭಾವಚಿತ್ರಗಳನ್ನು ಸಾಕ್ಷಿಗೆ ಪುನಃ ತೋರಿಸಿ ಅದರಲ್ಲಿ ಒಟ್ಟು ಎಷ್ಟು ಜನ ಮಹಿಳೆಯರು ಕಂಡು ಬರುತ್ತಾರೆ ಎಂದರೆ ಎಂಟು ಜನ ಮಹಿಳೆಯರು ಕಂಡು ಬರುತ್ತಾರೆ. ನಿ ಪಿ 2 ಮತ್ತು ನಿ ಪಿ 3 ರ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ನಿ ಪಿ 2 ರ ಭಾವಚಿತ್ರದಲ್ಲಿ ವಾಹನದ ಹೊರಗೆ ಯಾವುದೇ ಹೆಣ್ಣು ಮಕ್ಕಳು ಕಂಡು ಬರುತ್ತಿಲ್ಲ, ನಿ ಪಿ 3 ರ ಭಾವಚಿತ್ರದಲ್ಲಿ ಒಬ್ಬ ಹೆಣ್ಣು ಮಗಳು ವಾಹನದ ಹೊರಗೆ ಕಂಡು ಬರುತ್ತಾರೆ ಎಂದು ನುಡಿಯುತ್ತಾರೆ. ನಿ ಪಿ 2 ರ ಭಾವಚಿತ್ರದಲ್ಲಿ ರಟ್ಟಿನ ಬಾಕ್ಸ್ ಕಂಡು ಬರುತ್ತದೆಯೇ ಎಂದರೆ ಕಂಡು ಬರುತ್ತದೆ. ನಿ ಪಿ 2 ಮತ್ತು ನಿ ಪಿ 3 ರಲ್ಲಿರುವ ಕಂದು ಬಣ್ಣದ ರಟ್ಟಿನ ಬಾಕ್ಸ್ ಕಟ್ಟಿ ಮುಚ್ಚಲಾಗಿದೆ ಎಂದರೆ ಸಾಕ್ಷಿ ತೆಗೆದಿದ್ದೇವೆ ಎಂದು ನುಡಿಯುತ್ತಾರೆ. ಸದರಿ ರಟ್ಟಿನ ಬಾಕ್ಸ್ ಅನ್ನು ತೆರೆದು ಅದರೊಳಗೆ ಏನಿದೆ ಎಂಬ ಬಗ್ಗೆ ಯಾವುದೇ ಭಾವಚಿತ್ರವನ್ನು ತೆಗೆದು ಹಾಜರುಪಡಿಸಿಲ್ಲ ಎಂದರೆ ಸರಿ. ನಿ ಪಿ 2 ಮತ್ತು ನಿ ಪಿ 3 ರಲ್ಲಿ ಕಂಡು ಬರುವ ಗ್ಯಾಸ್ ಒಲೆಗಳಿಗೂ ಮು ಮಾ 1 ರಿಂದ 15 ಗ್ಯಾಸ್ ಒಲೆಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಆ ದಿನ ನಾನು ಮುದ್ದೆ ಅನ್ನ ಊಟ ಮಾಡಿದ್ದೇನೆ. ನಾನು ಕರ್ತವ್ಯ ನಿರ್ವಹಿಸುತ್ತಾ ಊಟ ಮಾಡುತ್ತಿದ್ದೆ. ವಾಹನ ಎಷ್ಟು ಗಂಟೆಗೆ ಬರುತ್ತದೆ ಎಂದು ಕರೆ ಮಾಡಿದ ವ್ಯಕ್ತಿ ನನಗೆ ಹೇಳಿಲ್ಲ ಆದರೆ ಹಾವೇರಿಯಿಂದ ವಾಹನ ಹೊರಡುತ್ತದೆ ಎಂದು ಹೇಳಿದ್ದರು. ಸದರಿ ವಾಹನವು ಹಾವೇರಿಯಿಂದ ಹಾನಗಲ್ಲ ಮೂಲಕ ಕಾಮನಹಳ್ಳಿಗೆ ಹೋಗುತ್ತಿತ್ತು. ಹಾವೇರಿಯಿಂದ ಕಾಮನಹಳ್ಳಿಗೆ ಹೋಗಲು ನಾನು ನಿಂತಿದ್ದ ರಸ್ತೆ ಒಂದೇ ದಾರಿ ಅಲ್ಲ ಎಂದರೆ ಸರಿ. ಕಾಮನಹಳ್ಳಿಗೆ ಹೋಗುವ ಬೇರೆ ದಾರಿಯಲ್ಲಿ ಯಾವುದಾದರೂ ಸಿಬ್ಬಂದಿಯನ್ನು ನಿಯೋಜಿಸಿದ್ದೀರಾ ಎಂದರೆ ಇಲ್ಲ ಖಚಿತವಾಗಿ ಇದೇ ದಾರಿಯಲ್ಲಿ ವಾಹನ ಬರುತ್ತದೆ ಎಂದು ಮಾಹಿತಿ ಇತ್ತು. ವಾಹನದಲ್ಲಿ ಇದ್ದ ವ್ಯಕ್ತಿಗಳಾಗಲೀ ಅಥವಾ ವಾಹನದ ಚಾಲಕನಾಗಲೀ ನನಗೆ ಕರೆ ಮಾಡಿ ಇಂತಹದೇ ದಾರಿಯಲ್ಲಿ ಬರುತ್ತಿದ್ದೇವೆ ಎಂದು ಹೇಳಿಲ್ಲ. ನಿ ಪಿ 2 ಮತ್ತು ನಿ ಪಿ 3 ರಲ್ಲಿರುವ ವಾಹನದಲ್ಲಿ ನಾನು ಹೇಳುವ ಒಲೆಗಳನ್ನು ಇಟ್ಟು 15 ಮಹಿಳೆಯರು ಕುಳಿತುಕೊಳ್ಳಲು ಜಾಗ ಇಲ್ಲ ಎಂದರೆ ಸರಿಯಲ್ಲ.

ವಾಹನವನ್ನು ಹಿಡಿದ ತಕ್ಷಣ ಏನು ಮಾಡಿದ್ದೀರಿ ಎಂದರೆ ವಾಹನದಲ್ಲಿದ್ದ ಚಾಲಕನ ಬಳಿ ಇದೇನು ಒಲೆಗಳು ಒಂದು ಕೇಳಿದ್ದೇನೆ. ಅದಕ್ಕೆ ಸದರಿ ವ್ಯಕ್ತಿಯು ಫಲಾನುಭವಿಗಳಿಗೆ ಹಂಚಲು ಒಲೆಗಳನ್ನು ತೆಗೆದುಕೊಂಡು ಹೋಗುತ್ತಿರುವುದಾಗಿ ಹೇಳಿದ. ನಾವು ವಾಹನವನ್ನು ಮುಂದಿನಿಂದ ಕೈ ಅಡ್ಡಗಟ್ಟಿ ತಡೆದು ನಿಲ್ಲಿಸಿದೆ. ನಾನು ಸ್ಥಳಕ್ಕೆ ಆಡೂರು ಠಾಣೆಯ ಪಿ.ಎಸ್.ಐ ರವರನ್ನು ಕರೆಸಿದೆ. ಅವರ ಹೆಸರು ಮುರುಗೇಶ. ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ಯಾಕೆ ಹಾಜರುಪಡಿಸಿಲ್ಲ

ಎಂದು ಪೊಲೀಸರಿಗೆ ನಾನು ಕೇಳಿಲ್ಲ. ಮುದ್ದೆಮಾಲು ಎಲ್ಲಿದೆ ಎಂದು ಕೇಳಿದ್ದೀರಾ ಎಂದರೆ ಅದು ಪೊಲೀಸರಿಗೆ ಸಂಬಂಧಿಸಿದ ವಿಷಯವಾಗಿದೆ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ.ಎಂ.ಹೆಚ್.ಹೆಚ್ ವಕೀಲರಿಂದಃ**

ಮಲಗುಂದ ಗ್ರಾಮದಿಂದ ಹಾವಣಗಿ, ವೀರಾಪುರ ಮೂಲಕ ಘಟನಾ ಸ್ಥಳಕ್ಕೆ ಹೋದೆವು. 11.55 ರಿಂದ 4.30 ಯ ವರೆಗೆ ತಪಾಸಣೆ ಮಾಡಿದರು. ಫೋನ್ ಮಾಡಿದ ವ್ಯಕ್ತಿಯ ಫೋನ್ ಅನ್ನು ಜಪ್ತು ಮಾಡಿಲ್ಲ. ಸದರಿ ಫೋನ್ ಅನ್ನು ಪರಿಶೀಲಿಸಿಲ್ಲ. ಗ್ಯಾಸ್ ಒಲೆಗಳನ್ನು ಮಂಜೂರು ಮಾಡಿದ ಬಗ್ಗೆ ದಾಖಲೆ ಕೇಳಿದ್ದೀರಾ ಎಂದರೆ ದಾಖಲೆ ಇಲ್ಲ ಎಂದು ಹೇಳಿದರು. ಘಟನಾ ಸ್ಥಳದ ಪೂರ್ವಕ್ಕೆ ಹಾವೇರಿ ಕಡೆಗೆ ರಸ್ತೆ, ಪಶ್ಚಿಮಕ್ಕೆ ಹಾನಗಲ್ಲ ಕಡೆಗೆ ರಸ್ತೆ, ಉತ್ತರಕ್ಕೆ ಅಡಿಕೆ ತೋಟ, ದಕ್ಷಿಣಕ್ಕೆ ಒಂದು ತೋಟ ಇತ್ತು. ಹಾವೇರಿಯಿಂದ ಘಟನಾ ಸ್ಥಳಕ್ಕೆ ತಲುಪಲು ಸುಮಾರು 30 ನಿಮಿಷ ಬೇಕು. ಒಲೆಗಳು ಒಟ್ಟು ಎರಡು ರಟ್ಟಿನ ಬಾಕ್ಸ್ ನಲ್ಲಿ ಇದ್ದು. ಈ ಬಗ್ಗೆ ಪಂಚನಾಮೆಯಲ್ಲಿ ಬರೆದಿಲ್ಲ. ದಾರಿಯಲ್ಲಿ ಹೋಗುತ್ತಿದ್ದ ವ್ಯಕ್ತಿಗಳನ್ನು ಪಂಚರನ್ನಾಗಿ ಕರೆಸಿದ್ದೇನೆ. ಪಂಚರನ್ನು ಚಾಸಾ-6 ರವರು ಕರೆದರು. ವಿಡಿಯೋಗ್ರಾಫರ್ ಭಾವಚಿತ್ರ ತೆಗೆದರು ಭಾವಚಿತ್ರ ತೆಗೆದವರ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿಲ್ಲ, ನಮ್ಮ ಜೊತೆಯೇ ಒಬ್ಬ ವಿಡಿಯೋಗ್ರಾಫರ್ ಇದ್ದರು. ಪಂಚನಾಮೆಯನ್ನು 4.30 ಯಿಂದ 5.30 ಯ ವರೆಗೆ ಮಾಡಿದ್ದೇನೆ. ಮತದಾನದ ಸಮಯದಲ್ಲಿ ನಾನು ಬಹಳ ಬ್ಯುಜಿಯಾಗಿರುತ್ತೇನೆ. ಒಂದೇ ಜಾಗದಲ್ಲಿ 3 ರಿಂದ 4 ಗಂಟೆ ಕರ್ತವ್ಯ ನಿರ್ವಹಿಸುವುದು ಅಸಾಧ್ಯ ಎಂದರೆ ಸರಿಯಲ್ಲ. ಗಾಡಿಯಲ್ಲಿದ್ದರೂ ಎನ್ನುವ 15 ಜನರ ಹೆಸರು ಈಗ ಹೇಳಲಾಗುವುದಿಲ್ಲ. ಅವರನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಒಬ್ಬ ಇಬ್ಬರನ್ನೂ ಗುರುತಿಸಬಹುದು. ವಾಹನದಲ್ಲಿ ಒಟ್ಟು 15 ಜನ ಇದ್ದರು. ನಾನು ಘಟನಾ ಸ್ಥಳದಲ್ಲಿ 2 ನೇ ಆರೋಪಿಯ ಬಳಿಯಿಂದ ಮು ಮಾ 1 ರ ಗ್ಯಾಸ್ ಒಲೆಗಳನ್ನು ಜಪ್ತು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮತದಾನದ ಸಮಯವಾಗಿದ್ದರಿಂದ ಅಂಕಿ ಅಂಶಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಠಾಣೆಗೆ ಹೋಗಿ ಕೊಟ್ಟೆ. ದೂರು ಕೊಟ್ಟಾಗ 5.30 ಯಿಂದ 5.45 ಆಗಿತ್ತು. ಘಟನಾ ಸ್ಥಳದಿಂದ ಆಡೂರ ಠಾಣೆ 5 ಕಿ.ಮೀ ದೂರ ಇತ್ತು. ದೂರನ್ನು ಟೈಪ್ ಮಾಡಿಸಿಕೊಟ್ಟೆ. ನಾನು ಘಟನೆ ನಡೆದಿದೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಸಹಿ/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್